ಪ್ರೋತ್ಸಾಹ ಧನ

372 (134) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಮಾಧ್ಯಮದಲ್ಲಿ IAS, IPS ಹಾಗೂ IFS ಹುದ್ದೆಗಳಿಗೆ ಕನ್ನಡದಲ್ಲಿ ಆಯ್ಕೆ ಪರೀಕ್ಷೆ ಬರೆದು ಉತ್ತೀರ್ಣರಾದ ಎಷ್ಟು ಅಭ್ಯರ್ಥಿಗಳಿಗೆ 2009–10 ಮತ್ತು 2010–11ನೇ ಸಾಲಿನಲ್ಲಿ ಪ್ರೋತ್ಸಾಹ ಧನ ನೀಡಲಾಗಿದೆ ;

ಆ) ಕೇಂದ್ರಾಡಳಿತ ಸೇವೆಗಳಿಗೆ ಕನ್ನಡದಲ್ಲಿ ಆಯ್ಕೆ ಪರೀಕ್ಷೆ ಬರೆದು ಉತ್ತೀರ್ಣರಾದ ಎಷ್ಟು ಅಭ್ಯರ್ಥಿಗಳಿಗೆ 2009–10 ಮತ್ತು 2010–11ನೇ ಸಾಲಿನಲ್ಲಿ ಪ್ರೋತ್ಸಾಹ ಧನವನ್ನು ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

ಇ) ಈ ಎರಡು ಯೋಜನೆಗಳಿಗೆ ಈವರೆಗೆ ಎಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) 2009–10 ಹಾಗೂ 2010–11ನೇ ಸಾಲಿನಲ್ಲಿ ಕನ್ನಡ ಮಾಧ್ಯಮದಲ್ಲಿ IAS, IPS ಹಾಗೂ IFS ಹುದ್ದೆಗಳಿಗೆ ಕನ್ನಡದಲ್ಲಿ ಆಯ್ಕೆ ಪರೀಕ್ಷೆ ಬರೆದು ಉತ್ತೀರ್ಣರಾದ ಅಭ್ಯರ್ಥಿಗಳು ಇರುವುದಿಲ್ಲ.

ಆ) 2009–10ನೇ ಸಾಲಿನಲ್ಲಿ ಯಾವ ಅಭ್ಯರ್ಥಿಗಳು ಇರುವುದಿಲ್ಲ.

2010–11ನೇ ಸಾಲಿನಲ್ಲಿ ಕನ್ನಡ ಮಾಧ್ಯಮದಲ್ಲಿ ಆಯ್ಕೆ ಪರೀಕ್ಷೆ ಬರೆದು ಕೇಂದ್ರಾಡಳಿತ ಸೇವೆಯಾದ IRS ಸೇವೆಗೆ ಆಯ್ಕೆಯಾಗಿರುವ ಡಾ॥ ಸಿ. ಸೋಮಣ್ಣ C/o ಸುಭಾಷ್ ಗುಮಾಸ್ತೆ ನಂ. 31 ವೈಭವಿ ಸಿದ್ಧರಾಮೇಶ್ವರ ಕಾಲೋನಿ, ರಾಣಿ ಚನ್ನಮ್ಮ ನಗರ, ಧಾರವಾಡ, ಇವರಿಗೆ ರೂ. 50,000/– ಸಾವಿರಗಳ ಪ್ರೋತ್ಸಾಹ ಧನವನ್ನು ಮಂಜೂರು ಮಾಡಲಾಗಿದೆ.

ಇ) ಈವರೆಗೆ ರೂ. 50,000/– ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

ಭೂ ಪರಿವರ್ತನೆ

373 (135) ಶ್ರೀ ವಸಂತ ಬಂಗೇರ .ಕೆ (ಬೆಳ್ತಂಗಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಕಛೇರಿಯಲ್ಲಿ ಭೂಪರಿವರ್ತನೆಯಾದ ಪ್ರಕರಣವನ್ನು ಭೂಮಿ ಶಾಖೆಯಲ್ಲಿ ಪಹಣಿ ಪತ್ರಿಕೆಯಲ್ಲಿ ದಾಖಲಿಸಲು ಎಷ್ಟು ಪ್ರಕರಣಗಳು ಬಾಕಿ ಇವೆ ಪಹಣಿ ಪತ್ರಿಕೆಯಲ್ಲಿ ದಾಖಲಿಸಲು ಇರುವ ತೊಂದರೆಗಳೇನು ;

ಆ) ಬೆಳ್ತಂಗಡಿ ತಾಲ್ಲೂಕು ಕಛೇರಿಯಲ್ಲಿ ಕಳೆದ 3 ವರ್ಷಗಳಲ್ಲಿ ಭೂಪರಿವರ್ತನೆಗಾಗಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು ; (ವರ್ಷವಾರು ವಿವರ ನೀಡುವುದು)

ಇ) ಅವುಗಳಲ್ಲಿ ಎಷ್ಟು ಪ್ರಕರಣಗಳನ್ನು ತಾಲ್ಲೂಕು ಕಛೇರಿಯಲ್ಲಿಯೇ ಇತ್ಯರ್ಥಗೊಳಿಸಲಾಗಿದೆ ; (ವರ್ಷಾವಾರು ವಿವರ ನೀಡುವುದು)

ಈ) ಎಷ್ಟು ಪ್ರಕರಣಗಳನ್ನು ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗಿದೆ ; (ವರ್ಷವಾರು ವಿವರ ನೀಡುವುದು)

ಉ) ಭೂಪರಿವರ್ತನೆಗಾಗಿ ಅರ್ಜಿ ಸಲ್ಲಿಸಿ 31 ಡಿಸೆಂಬರ್, 2010ಕ್ಕೆ 4 ತಿಂಗಳು ಕಳೆದಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಬೆಳ್ತಂಗಡಿ ತಾಲ್ಲೂಕು ಕಛೇರಿಯಲ್ಲಿ ಭೂಪರಿವರ್ತನೆಯಾದ ಪ್ರಕರಣಗಳನ್ನು ಭೂಮಿ ಶಾಖೆಯಲ್ಲಿ ಪಹಣಿ ಪತ್ರಿಕೆಯಲ್ಲಿ ದಾಖಲಿಸಲು ಇತ್ತೀಚಿನ 25 ಪ್ರಕರಣಗಳು ಬಾಕಿ ಇರುತ್ತವೆ. ಸೂಕ್ತ ದಾಖಲೆಗಳು ಇಲ್ಲದೆ ಪಹಣಿ ಪತ್ರಿಕೆಯಲ್ಲಿ ದಾಖಲಿಸಲು ತೊಂದರೆಯಾಗಿರುವುದು. ಸೂಕ್ತ ದಾಖಲೆಗಳನ್ನು ಪಡೆದು ಈ ತೊಂದರೆಯನ್ನು ಶೀಘ್ರವಾಗಿ ಪರಿಹರಿಸಲಾಗುವುದು.

ಆ)

ವರ್ಷ	ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ
2008–09	441
2009–10	558
2010–11	502
2008–09	353
2009–10	435
2010–11	385

ವರ್ಷ	ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ
2008–09	88
2009–10	123
2010–11	81

ಇ) 31 ಡಿಸೆಂಬರ್ 2010ಕ್ಕೆ, 4 ತಿಂಗಳು ಕಳೆದಿರುವ ಪ್ರಕರಣಗಳ ಸಂಖ್ಯೆ 5.

ಪ್ರಸ್ತುತ ಸದರಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿರುತ್ತದೆ.

ನಿವೇಶನ ಹಂಚಿಕೆ

374 (136) ಶ್ರೀ ವಸಂತ ಬಂಗೇರ .ಕೆ (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ನಿವೇಶನ ರಹಿತರಿಗಾಗಿ ನಿವೇಶನಗಳನ್ನು ಕಾದಿರಿಸಿದ್ದರೂ ಹತ್ತಾರು ವರ್ಷಗಳಿಂದ ನಿವೇಶನಗಳ ಹಕ್ಕು ಪತ್ರಗಳನ್ನು ವಿತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಜಾಗವನ್ನು ನಿವೇಶನಕ್ಕಾಗಿ ಕಾದಿರಿಸಲಾಗಿದೆ ಮತ್ತು ಸದರಿ ಜಾಗದಲ್ಲಿ ಎಷ್ಟು ನಿವೇಶನಗಳು ಲಭ್ಯವಿರುತ್ತವೆ ; (ಪಂಚಾಯತ್‌ವಾರು ವಿವರ ನೀಡುವುದು)

ಇ) ಈ ಸದರಿ ನಿವೇಶನಗಳನ್ನು ಅರ್ಹರಿಗೆ ಯಾವಾಗ ವಿತರಿಸಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಇಲ್ಲ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಳೆದ 10 ವರ್ಷಗಳಿಂದ ನಿವೇಶನ ರಹಿತರಿಗೆ ವಿತರಿಸಿದ ಹಕ್ಕು ಪತ್ರಗಳ ವಿವರ ಈ ಕೆಳಗಿನಂತೆ ಇರುತ್ತದೆ.

ತಾಲ್ಲೂಕು	ವರ್ಷ	ವಿತರಿಸದ ಹಕ್ಕು ಪತ್ರಗಳು
ಬೆಳ್ತಂಗಡಿ	2001–02	343
	2002–03	504
	2003–04	–